ಅಸಲು ದಾವಾ ನಂ.ಃ 39/2022 CW1

ದಿನಾಂಕ 27-02-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ವಾದಿಯ ಪರ ಶ್ರೀ ವಾಯ್ ಎನ್ ಎ ವಕೀಲರಿಂದ.

ದಾವಾ ಆಸ್ತಿಯ ಸಿ ಟಿ ಸರ್ವೇ ದಾಖಲೆಯಲ್ಲಿ ವಾದಿ ಮತ್ತು ಪ್ರತಿವಾದಿ ಇಬ್ಬರ ಹೆಸರು ದಾಖಲಾಗಿತ್ತು ಎಂದರೆ ಸರಿ. ಆ ಪ್ರಕಾರ ಇಬ್ಬರ ಹೆಸರನ್ನು ಪುರಸಭೆ ಆಸ್ತಿ ರಜಿಸ್ಟರ ನಲ್ಲಿ ನಮೂದಿಸಿರುತ್ತೀರಿ ಎಂದರೆ ಸರಿ. ಪುರಸಭೆ ದಾಖಲೆಯ ಪ್ರಕಾರ ವಾದಿಯ ಹೆಸರಿಗೆ ಬಿ 642 ಸಂಖ್ಯೆಯನ್ನು ಕೊಟ್ಟಿದ್ದೀರಿ ಎಂದರೆ ಸರಿ. ಬಿ 643 ಅನ್ನು ಪ್ರತಿವಾದಿಯ ಹೆಸರಿಗೆ ಕೊಟ್ಟಿದ್ದೀರಿ ಎಂದರೆ ಸರಿ. ನಿಪಿ 30 ಅನ್ನು ತೋರಿಸಿ ಆಸ್ತಿ ಸಂಖ್ಯೆ ಬಿ642 ಮತ್ತು ಬಿ643 ರ ಸಂಖ್ಯೆ ಆ ಸಂಖ್ಯೆ ಬರುವ ಮೊದಲು ಬಿ373 ಎಂದು ಇತ್ತು ಎಂದರೆ ಸರಿ. ಬಿ373 ರ ಆಸ್ತಿ ವಾದಿಯ ಹೆಸರಿಗೆ ದಾಖಲಾಗಿತ್ತು ಎಂದು ಪುರಸಭೆಯವರು ವಾದಿಗೆ ಪ್ರಮಾಣ ಪತ್ರ ನೀಡಿದ್ದಾರೆ ಎಂದರೆ ಸರಿ. ನಿಪಿ 8 ವಾದಿಗೆ ಕೊಟ್ಟ ಆಸ್ತಿ ವಿವರವನ್ನು ಖಚಿತಪಡಿಸಿಕೊಳ್ಳುವ ಬಗ್ಗೆ ಕೊಟ್ಟ ಪ್ರಮಾಣ ಪತ್ರ ಎಂದರೆ ಸರಿ. ನಿಪಿ 8 ಯಾವ ವರ್ಷಕ್ಕೆ ಸಂಬಂಧ ಪಟ್ಟಿದ್ದು ಎಂದರೆ ಸಾಕ್ಷಿ 2003 ರ ಕ್ಕೆ ಸಂಬಂಧ ಪಟ್ಟಿದ್ದು ಎನ್ನುತ್ತಾರೆ. ಅದರಲ್ಲಿ ವಾದಿಯ ಹೆಸರು ದಾಖಲಾಗಿದೆ ಎಂದರೆ ಸರಿ. ನಿಪಿ 2 ರ ದಾಖಲೆಯು ಯಾವ ವರ್ಷಕ್ಕೆ ಸಂಬಂಧ ಪಟ್ಟಿದ್ದು ಎಂದರೆ ಸಾಕ್ಷಿ 2022 ಕ್ಕೆ ಸಂಬಂಧಪಟ್ಟಿದ್ದು ಎನ್ನುತ್ತಾರೆ. 1985-86 ರಲ್ಲಿ ಪ್ರತಿವಾದಿಯ ಒಬ್ಬರ ಹೆಸರು ದಾಖಲಾದ ಬಗ್ಗೆ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 1985-86 ರ ಎಮ್ ಎ ಆರ್ ಮೂಲ ದಾಖಲೆಯಾಗಿತ್ತು, ನಂತರದಲ್ಲಿ ನಿಪಿ 2 ದಾಖಲಾಗಿದೆ. ನಿಪಿ 2 ರಲ್ಲಿ ವಾದಿ ಮತ್ತು ಪ್ರತಿವಾದಿ ಇಬ್ಬರ ಹೆಸರು ಮಾತ್ರ ದಾಖಲಾಗಿದೆ ಎಂದರೆ ಸರಿ. ಯಾವುದೇ ತಿದ್ದುಪಡಿಗಳು ಆಗಿಲ್ಲ ಎಂದರೆ ಸಾಕ್ಷಿ ಆ ದಾಖಲೆಯಲ್ಲಿ whitener ಹಚ್ಚಲಾಗಿದೆ ಯಾರು ಹಚ್ಚಲಾಗಿದೆ ಎನ್ನುವುದು ಗೊತ್ತಿಲ್ಲ. whitener ಹಚ್ಚುವ ಮೊದಲು ಯಾರ ಹೆಸರು ದಾಖಲಾಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನೀವು ಆಸ್ತಿ ರಜಿಸ್ಟರ ನಲ್ಲಿ ತಪ್ಪುಗಳಾದರೆ whitener ಹಚ್ಚಿ ಸರಿಮಾಡುತ್ತಿರೋ ಅಥವಾ ಪೂರ್ತಿ ರಜಿಸ್ಟರ ಅನ್ನು ಬದಲಾಯಿಸುತ್ತಿರೋ ಎಂದರೆ ಸಾಕ್ಷಿ whitener ಹಚ್ಚಿ ಸರಿ ಮಾಡುತ್ತೇವೆ ಎನ್ನುತ್ತಾರೆ. 1985-86 ರ ಎಮ್ ಎ ಆರ್ ರಜಿಸ್ಟರ

ಅಸಲು ದಾವಾ ನಂ.ಃ 39/2022 CW1

ನಲ್ಲಿ ವಾದಿ ಮತ್ತು ಪ್ರತಿವಾದಿಯರ ಇಬ್ಬರ ಹೆಸರು ದಾಖಲಾಗಿದ್ದು, ಅದರಲ್ಲಿ ಯಾವುದೇ ಬದಲಾವಣೆಗಳು ಆಗಿಲ್ಲ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೆ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.